A.—Sri H. SIDDAVEERAPPA (Minister for Home and Industries).—

(*a*) Yes.

(*b*) On 3rd April 1953. The Police had to open fire to prevent a clash between two unruly mobs and also as a measure of self defence.

(*c*) No. The matter is *sub judice*.

Sri MULKA GOVINDA REDDY.—In answer to question (*c*) you have stated that it is not possible to make a statement; but, is it not desirable to make a statement regarding the facts of the case?

Sri H. SIDDAVEERAPPA.—I am sorry that I am precluded from making a statement, because the matter is *sub judice*.

Sri MULKA GOVINDA REDDY.—I am not asking Government to go into the merits of the case, but only into the facts of the case—what led the Police to this incident?

Sri H. SIDDAVEERAPPA.—I am sorry. I cannot disconnect one from the other. That is my difficulty.

Irrigation wells started under the Grow More Food Scheme.

Q.—317. Sri G. BASAPPA (Hosadurga).—

Will the Government be pleased to state:—

(*a*) the number of irrigation wells sanctioned and the amount spent so far in the State under Grow More Food Scheme in 1952-53;

(*b*) the number of wells which are complete and incomplete;

(*c*) (i) the action taken in respect of those which are not complete, and

(ii) the amount recovered so far?

A.—Sri H. SIDDAVEERAPPA (Minister for Home and Industries).—

(*a*) Sanctioned for 1952-53—1,701.

Amount spent—Rs. 4,11,274.

(*b*) Wells—

Completed—7,384.

Incomplete—5,526.

(*c*) (i) Action is being taken to recover the amounts in cases of violation of the conditions of grant.

(ii) Rs. 1,17,310-0-5.

ಶ್ರೀ ಜಿ. ಬಸಪ್ಪ.—(ಬಿ) ಭಾಗಕ್ಕೆ ಉತ್ತರವಾಗಿ ಕೊಟ್ಟಿರುವ ಅಂಕಿ ಅಂಶಗಳನ್ನು ಡಿಸ್ಟ್ರಿಕ್ಟ್‌ವಾರು ಹೇಳುವುದಕ್ಕೆ ಸಾಧ್ಯವೆ?

*Sri H. SIDDAVEERAPPA.—Districtwar figures—I can give you.

ಶ್ರೀ ಜಿ. ಬಸಪ್ಪ.—ದಯವಿಟ್ಟು ಹೇಳಬೇಕೆಂದು ಕೇಳುತ್ತೇನೆ.

Sri H. SIDDAVEERAPPA.—The following are the figures. These figures refer to end of September 1952.

	Completed wells	Incomplete wells
Bangalore District ..	737	54
Kolar District ..	2,955	2,064
Tumkur District ..	2,145	984
Mysore District ..	74	181
Mandya District ..	39	330
Hassan District ..	39	53
Shimoga District ..	33	30
Chikmagalur District ..	8	277
Chitaldrug District ..	947	1,150

ಶ್ರೀ ಜಿ. ಬಸಪ್ಪ.—5,526 'ಇಕಂಪ್ಲೀಟ್' ಎಂದಿದೆ. ಇವು ಪೂರ್ತಿಯಾಗುವ ಸ್ಥಿತಿಯಲ್ಲಿವೆಯೋ ಅಥವಾ ಹಣವಸೂಲುಮಾಡುವ ಸ್ಥಿತಿಯಲ್ಲಿವೆಯೊ?

Sri H. SIDDAVEERAPPA.—Incomplete wells will be completed in due course.

ಶ್ರೀ ಜಿ. ಬಸಪ್ಪ.—1,17,310-0-5 ರೂಪಾಯಿ ವಸೂಲಾಗಿದೆ ಎಂದು ತಿಳಿಸಲಾಗಿದೆ. ಇದು ಇನ್ನೂ ಪೂರ್ತಿಯಾಗದೆ ಉಳಿದಿರುವ 5,526 ಬಾವಿಗಳಿಗೂ ಅನ್ವಯಿಸುತ್ತದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಯಾರು ಯಾರಿಂ ನಮ್ಮಿಂದ ಹಣವನ್ನು ತೆಗೆದುಕೊಂಡು ಕೆಲಸವನ್ನು ಮಾಡಿಸುವುದಿಲ್ಲವೋ ಅವರಿಂದ ವಸೂಲು ಮಾಡುತ್ತೇವೆ.

ಶ್ರೀ ಜಿ. ಬಸಪ್ಪ.—'ಇಕಂಪ್ಲೀಟ್' ಎಂದರೆ, ಕೆಲಸ ಮಾಡಿಸಿದ್ದಾರೆಂದು ಅರ್ಥವಾಗುವುದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—'ಇಕಂಪ್ಲೀಟ್' ಎಂದರೆ ಅರ್ಧ ಆಗಿದೆ, ಪೂರ್ತಿ ಆಗಿಲ್ಲ ಎಂದರ್ಥ.

ಶ್ರೀ ಜಿ. ಬಸಪ್ಪ.—ಇಷ್ಟೊಂದು ಹಣ ವಸೂಲಾಗಿರುವುದನ್ನು ನೋಡಿದರೆ, ಒಂದೊಂದು ಬಾವಿಗೆ ಎರಡು ಮೂರು ಸಾವಿರ ರೂಪಾಯಿ ಖರ್ಚು ಮಾಡಲು ಸಾಧ್ಯವಿಲ್ಲದಿರುವಾಗ, ಅಂಥವರಿಂದ ಇಷ್ಟು ಭಾರಿ ಮೊಬಲಗನ್ನು ಕೊಡಲು ಸಾಧ್ಯವೆ?

ಶ್ರೀ ಎಚ್. ಸಿದ್ದವೀರಪ್ಪ.—ಇಷ್ಟು ಭಾರಿ ಮೊಬಲಗು ವಸೂಲಾಗಿರುವುದಕ್ಕೆ ಕಾರಣ, ಹಣ ತೆಗೆದು ಕೊಂಡು ಬಾವಿ ತೆಗೆಸದೇಯಿರುವವರೂ ಇದ್ದಾರೆ.

ಶ್ರೀ ಜಿ. ಬಸಪ್ಪ.—ಬಾವಿ ತೆಗೆಸದೇಯಿರುವವರಿಗೂ ಹಣ ಕೊಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ. ತಗೆನುತ್ತೇವೆಂದು ಹೇಳಿ ತಗೆದುಕೊಳ್ಳುತ್ತಾರೆ, ಆಮೇಲೆ ತಗೆನುವುದಿಲ್ಲ.

ಶ್ರೀ ಜಿ. ಬಸಪ್ಪ.—ರೆವೆನ್ಯೂ ಅಧಿಕಾರಿಗಳ ವರದಿಯ ಮೇಲೆ ಹಣ ಕೊಡುವುದಿಲ್ಲವೆ ?

Sri H. SIDDAVEERAPPA.—Government set up an enquiry to find out as to what extent the subsidy given by them was used for the purpose. On the enquiry being instituted, it was found that many had not used the money for the purpose for which it was given. Then, orders were issued to recover the amount from such people.

ಶ್ರೀ ಜಿ. ಬಸಪ್ಪ.—ಈಗ 7,384 ಬಾವಿಗಳು ಪೂರ್ತಿಯಾಗಿವೆ. ಅವುಗಳಿಂದ ಆಹಾರ ಬೆಳೆಯುತ್ತಿದ್ದಾರೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಬೆಳೆಯುತ್ತಾರೆಂದು ನಿರೀಕ್ಷಣೆಯಿದೆ.

ಶ್ರೀ ಜಿ. ಬಸಪ್ಪ.—ಬೆಳೆಯುತ್ತಾರೆಯೆ ?

Mr. SPEAKER.—It is understood. Any other question ?

ಶ್ರೀ ಜಿ. ಬಸಪ್ಪ.—ಇಷ್ಟು ಹೆಚ್ಚು ಹಣ ವಸೂಲಾಗುತ್ತಿರುವುದನ್ನು ನೋಡಿದರೆ, ನೀವು ಕೊಡುವ ಗ್ಯಾರಂಟಿನ್ನು ಹೆಚ್ಚುಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಈಗ 500 ರೂಪಾಯಿ ಕೊಡಬೇಕೆಂದು ಆಜ್ಞೆ ಇದೆ.

ಶ್ರೀ ಜಿ. ಬಸಪ್ಪ.—ನ್ಯೂತನ ಆಹಾರ ಬೆಳೆಯಬೇಕೆಂದು ಇಷ್ಟವಿದ್ದರೂ ಹಣ ಖರ್ಚು ಮಾಡಲು ಶಕ್ತಿಯಿಲ್ಲದವರಿಗೆ ಪೂರ್ತಿ ಹಣ ಕೊಟ್ಟು ಅವರಿಂದ ಕಂತುಗಳ ಮೂಲಕ ಹಣ ವಾಪಸು ತೆಗೆದುಕೊಳ್ಳುವುದಕ್ಕೆ ಸಾಧ್ಯವೆ ?

ಶ್ರೀ ಎಚ್. ಸಿದ್ದವೀರಪ್ಪ.—ನಾವೂ ಇಂಡಿಯಾ ಸರ್ಕಾರದವರೊಂದಿಗೆ ಸೇರಿ ಒಂದು ಏರ್ಪಾಡು ಮಾಡಿರುವುದು. ನಾವು ಶೇಕಡ 50ರಷ್ಟು ಕೊಡುತ್ತೇವೆ, ಅವರು 50ರಷ್ಟು ಕೊಡುತ್ತಾರೆ ಹೀಗಿರುವಾಗ ನಾವೇ ಬೇರೆ ರೀತಿ ಮಾಡುವುದು ಕಷ್ಟ.

ಶ್ರೀ ಜಿ. ಬಸಪ್ಪ.—ಆ ರೀತಿ ಮಾಡಿದರೆ ಸರ್ಕಾರದವರಿಗೇನೂ ಕಷ್ಟವಾಗುವುದಿಲ್ಲ. ಹೆಚ್ಚು ಆಹಾರ ಬೆಳೆಯುವುದಕ್ಕೆ ಉತ್ತೇಜನ ಕೊಟ್ಟಂತಾಗುತ್ತಲ್ಲವೆ ?

Sri H. SIDDAVEERAPPA.—I am afraid it will not fit into the scheme as laid down by the Government of India.

Mr. SPEAKER.—There is a recent Government Order on this matter.

Sri H. SIDDAVEERAPPA.—It is a transition period. 250 ರೂಪಾಯಿಗಳಿಗೆ ಬದಲಾಗಿ 500 ರೂಪಾಯಿಗಳನ್ನು ಕೊಡಬಹುದೆಂದು ಆರ್ಡರ್ ಆಗಿದೆ.

ಶ್ರೀ ಪ್ಯೆ. ಎಂ. ಚಂದ್ರಶೇಖರಯ್ಯ.—ಕಡೂರು ಜಿಲ್ಲೆಯಲ್ಲಿ ಈಗಲೂ ಸಹ 500 ರೂಪಾಯಿಗಳನ್ನು ಕೊಡದೆ 250 ರೂಪಾಯಿಗಳನ್ನೇ ಕೊಡುತ್ತಿರಲು ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.—500 ರೂಪಾಯಿಗಳನ್ನು ಕೊಡಬೇಕೆಂದು ಹುಕ್ಕುಂ ಆಗಿದೆ.

ಶ್ರೀ ಪ್ಯೆ. ಎಂ. ಚಂದ್ರಶೇಖರಯ್ಯ.—500 ರೂಪಾಯಿಗಳನ್ನು ಕೊಡಬೇಕೆಂದು ಆಜ್ಞೆಯಾದದ್ದು ಯಾವಾಗ ?

ಶ್ರೀ ಎಚ್. ಸಿದ್ದವೀರಪ್ಪ.—ಇತ್ತೀಚೆಗೆ.

ಶ್ರೀ ಎ ಎ. ನರಸಿಂಹರೆಡ್ಡಿ.—ಸಂಸ್ಥಾನಾಮಳೆ ಎಲ್ಲರಿಗೂ 500 ರೂಪಾಯಿಗಳನ್ನು ಕೊಡಬೇಕೆಂದು ಹುಕ್ಕುಂ ಆಗಿದೆಯೋ ಆಥವಾ ಕೇವಲ ಡಿಸ್ಟ್ರೆಸ್ ಏರಿಯಾದಲ್ಲಿ ಮಾತ್ರ ಹಾಗೆ 500 ರೂಪಾಯಿಗಳನ್ನು ಕೊಡಬೇಕೆಂದು ಹುಕ್ಕುಂ ಆಗಿದೆಯೋ ?

ಶ್ರೀ ಎಚ್. ಸಿದ್ದವೀರಪ್ಪ.—ಡಿಸ್ಟ್ರೆಸ್ ಏರಿಯಾದಲ್ಲಿ ಒಂದು ಬಾವಿಗೆ 500 ರೂಪಾಯಿಗಳನ್ನು ಕೊಡಬೇಕೆಂದು ಆಜ್ಞೆಯಾಗಿದೆ.

ಶ್ರೀ ಎ. ಎ. ನರಸಿಂಹರೆಡ್ಡಿ.—ಸಂಸ್ಥಾನಾಮಳೆ ಎಲ್ಲರಿಗೂ 500 ರೂಪಾಯಿಗಳ ಪ್ರಕಾರ ಕೊಡಬೇಕೆಂದು ಕೇಳಿಕೊಂಡಿರಲಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಇಂಡಿಯಾ ಗವರ್ನಮೆಂಟನವರು ಆ ರೀತಿ ತೀರ್ಮಾನ ಮಾಡಿದ್ದಾರೆ.

ಶ್ರೀ ಯು. ಎಂ. ಮಾದಪ್ಪ.—ಬಾವಿಗಳು ಪೂರ್ತಿಯಾಗಿ ಕಂಪ್ಲೀಟ್ ಆಗಿದ್ದರೂ ಅಂಥವರಿಂದ ಹಣವನ್ನು ಕಿತ್ತುಕೊಂಡಿರುವಂಥ ನಿದರ್ಶನಗಳು ತಮ್ಮ ಗಮನಕ್ಕೆ ಬಂದಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಯು. ಎಂ. ಮಾದಪ್ಪ.—ಅಂಥ ನಿದರ್ಶನಗಳನ್ನು ತಮ್ಮ ಗಮನಕ್ಕೆ ತಂದರೆ ಅದನ್ನು ವಾಪಸ್ಸು ಕೊಡಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಊಹಾಪೋಹದ ಪ್ರಶ್ನೆಯಾಯಿತು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಕೇವಲ ಡಿಸ್ಟ್ರೆಸ್ ಏರಿಯಕ್ಕೆ ಮಾತ್ರವೇ ಅಲ್ಲದೆ ಸಂಸ್ಥಾನಾದ ಮಳೆ ಎಲ್ಲರಿಗೂ 500 ರೂಪಾಯಿಗಳನ್ನು ಕೊಡುವಹಾಗೆ ಏರ್ಪಾಡು ಮಾಡುತ್ತೀರಾ ?

ಅಧ್ಯಕ್ಷರು.—ಆಗಲೇ ಅದಕ್ಕೆ ಉತ್ತರವನ್ನು ಹೇಳಿದ್ದಾರೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಪೂರ್ತಿ ಮಾಡದೆ ಇರುವ ಈ 5,526 ಬಾವಿಗಳ ಕೆಲಸವು ರೈತರಿಗೆ ಹಣದ ಅಭಾವದಿಂದ ಆ ಕೆಲಸ ಪೂರ್ತಿ ಮಾಡಲು ಆಗಲಿಲ್ಲವೆಂಬ ಅಂಶ ಸರ್ಕಾರದವರಿಗೆ ಗೊತ್ತಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಇರಬಹುದು. To some extent, it may be.

ಶ್ರೀ ಮುಲ್ಕ ಗೋವಿಂದರೆಡ್ಡಿ.—ತಾವು ಕೊಡುವ ಹಣ ಬಾವಿ ಕೆಲಸಕ್ಕೆ ಸಾಲದ್ದರಿಂದ ಮತ್ತೆ 500 ರೂಪಾಯಿಗಳನ್ನು ರೈತರಿಗೆ ಸಾಲದರೂಪವಾಗಿಯಾದರೂ ಕೊಟ್ಟು ಅವರಿಗೆ ಒಟ್ಟು 750 ರೂಪಾಯಿಗಳನ್ನು ಕೊಡಬೇಕೆಂದು ನಾವು ಕೇಳಿಕೊಂಡಿರಲಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಮಾಡೋಣ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಬಾಗೇಪಲ್ಲಿ, ಗುಡಿಬಂಡೆ ಈ ತಾಲ್ಲೂಕುಗಳನ್ನು ತಾವು ಡಿಸ್ಟ್ರೆಸ್ಡ್ ಏರಿಯಾಗಳೆಂದು ಪರಿಗಣಿಸಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು ಕೋಲಾರ ಜಿಲ್ಲೆಯನ್ನು ಡಿಸ್ಟ್ರೆಸ್ಡ್ ಏರಿಯಾ ಎಂದು ಪರಿಗಣಿಸಲಾಗಿದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಹಾಗಿದ್ದರೂ ಕೂಡ ಏಕೆ ಈಗ ಅಲ್ಲಿ 500 ರೂಪಾಯಿಗಳನ್ನು ಕೊಡುತ್ತಿಲ್ಲ ? ಅದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆ ಕೊಡುತ್ತಿಲ್ಲ ವೆಂಬ ಅಂಶ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಅಲ್ಲಿ ಅಮಲ್ದಾರರನ್ನು ಕೇಳಿದರೆ 500 ರೂಪಾಯಿಗಳನ್ನು ಕೊಡುವುದಿಲ್ಲವೆಂದು ಹೇಳುತ್ತಾರೆ. ಎಂಡಾರ್ಸ್‌ಮೆಂಟ್ ಕೇಳಿದರೆ ಅದನ್ನೂ ಸಹ ಕೊಡುತ್ತಿಲ್ಲ. ಈ ಅಂಶ ತಮ್ಮ ಗಮನಕ್ಕೆ ಬಂದಿಲ್ಲವೇ ?

Mr. SPEAKER.—It is a recent order.

Sri B. V. NARAYANA REDDY.—Not very recent. It was brought up at the last meeting of the District Relief Committee.

ಶ್ರೀ ಜಿ. ನಾರಾಯಣಗೌಡ.—ತಾವು ಹಾಗೆ ಛಾಪಿಯೊಂದಕ್ಕೆ 500 ರೂಪಾಯಿಗಳನ್ನು ಕೊಡಬೇಕೆಂದು ಹೇಳಿರತಕ್ಕದ್ದು ಈ ಜುಲೈ ಒಂದನೆಯ ತಾರೀಖಿನಿಂದ ಹಾಗೆ ಜಾರಿಗೆ ಬಂದಿರುತ್ತದಲ್ಲವೆ ?

Sri H. SIDDAVEERAPPA.—I want notice.

Hardship caused by enhancing rates for power supply for irrigation.

Q.—26. Sri MULKA GOVINDA REDDY (Chitaldrug).—

Will the Government be pleased to state :—

(*a*) when they enhanced the rates for power supply for Irrigation for Food Crops and for Commercial Crops ;

(*b*) what will be the enhanced rates ;

(*c*) whether it has not come to their notice that it will cause immense hardship to the agriculturists and that it would discourage the raiyats in taking advantage of electricity ;

(*d*) what action they have taken?

A.—Sri K. HANUMANTHAIYA (Chief Minister).—

(*a*) In January 1953 to be brought into effect from 1st April 1953.

(*b*) Re. 0-1-0 per unit of power consumed or Re. 1 per H.P. per month, whichever is higher, for Food Crops.

Re. 0-1-6 per unit of power consumed or Rs. 3 per H.P. per month, whichever is higher, for Commercial Crops.

(*c*) There have been representations in that behalf.

(*d*) The orders revising the rates have been held in abeyance.

Sri MULKA GOVINDA REDDY.—With reference to answer to (*d*)...ದರಗಳನ್ನು ಬದಲಾಯಿಸುವುದಕ್ಕೆ ಸಂಬಂಧಪಟ್ಟ ಹುಕುಮುಗಳನ್ನು ಅಮಾನತ್ತಿನಲ್ಲಟ್ಟಿರುವುದು ಅದನ್ನು ರದ್ದುಮಾಡುವುದಕ್ಕಾಗಿಯೇ ?

Sri K. HANUMANTHAIYA.—A Committee has been appointed to go into the question. Incidentally I might bring to the knowledge of the House that representations were made that the increased rates were too high ; Sri Datar Singh who is instrumental in getting us the loan for irrigation pumps was present when I discussed the matter with the representationists. I asked him to let me know the rates prevailing in other States. He has written in his letter dated 1st June 1953 that the rate prevailing in Punjab is 5 annas per unit and in PEPSU and U.P. 4 annas per unit. What we charge in Mysore is 1 anna and 1 anna six pies per unit for food crops and commercial crops respectively.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈಗ ತಾವು ಓದಿದ್ದನ್ನು ನೋಡಿದರೆ, ಇಲ್ಲಿಯೂ ಸಹ ಅದೇರೀತಿ ಮಾಡಬೇಕೆಂತಲೇ ತಾವು ಅದನ್ನು ಓದಿದರೆಂದು ಕಾಣುತ್ತಲ್ಲವೇ ?

Sri K. HANUMANTHAIYA.—The matter will be placed before the Committee which has been appointed for the purpose of determining a fair rate both to the Government and to the agriculturits.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಆ ಸಮಿತಿ ಯಾವಾಗ ನೇಮಕವಾಯಿತು ? ಮತ್ತೂ ಆ ಸಮಿತಿಯ ಸದಸ್ಯರ ಹೆಸರುಗಳೇನು ?

Mr. SPEAKER.—That does not arise.

Sri MULKA GOVINDA REDDY.—It arises out of this. ಆ ಸಮಿತಿಯವರು ಏನು ತೀರ್ಮಾನಮಾಡುತ್ತಾರೋ ಆ ತೀರ್ಮಾನ ಆ ಸಮಿತಿಯಲ್ಲಿ ವಿರೋಧ ಪಕ್ಷದ ಸದಸ್ಯರಿಗೆ ಎಷ್ಟರ ಮಟ್ಟಿಗೆ ಅವಕಾಶ ಕಲ್ಪಿಸಿದೆ ಎಂಬುದರಮೇಲೆ ಹೋಗುತ್ತದೆ—ಅದಕ್ಕಾಗಿ ಕೇಳುತ್ತಿದ್ದೇನೆ ?

Mr. SPEAKER.—Any other question ?

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈಗ ಹಾಕಿರತಕ್ಕ ರೇಟುಗಳು ಬಹಳ ಜಾಸ್ತಿಯಾಯಿತೆಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

Sri K. HANUMANTHAIYA.—I have answered that question.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಬಹಳ 'ಹೆವಿ' ಆಯಿತು ಎಂಬ ಅಂಶ ತಮ್ಮ ಗಮನಕ್ಕೆ ಬಂದಿಲ್ಲವೇ ?